ಪಾಪಣ್ಣನ್ನ ಕಂಡ್ರೆ ಏನನ್ನುತ್ತೆ ನಿಂಗೆ?"

"ಪುಟ್ಟ ದೇವರು ಅನ್ನುತ್ತೆ. ದೇವರು ಕಲ್ಲಾಗಿ ಕೂತಿದಾನೆ, ಇವನು ಕೈಕಾಲು ಆಡಿಸ್ತಾನೆ. ಸಿಟ್ಟು, ಸೆಡವು, ಅಳು, ಹಟ ಏನೂ ಗೊತ್ತಿಲ್ಲದ ಕಂದ...'

ಈ ಹೋಲಿಕೆಯನ್ನು ನಿರೀಕ್ಷಿಸಿರದಿದ್ದ ಜನಾರ್ದನನ ಹೃದಯ ಹೆಚ್ಚು ಓದದ, ನಾಗರಿಕತೆಯ ಸೋಂಕು ತಗುಲದ, ಈ ಹಳ್ಳಿ ಹೆಂಗಸಿನ ಬಾಯಿಂದ ಉದುರಿದ ಆಣಿಮುತ್ತುಗಳನ್ನು ಕೇಳಿ ಮೇಣದಂತೆ ಕರಗಿ ಹೋಯ್ತು. ಹೇಳುತ್ತಿದ್ದಾಳೆ ಮಾಲಕ್ಷ್ಮಿ,

"ನಾನೇನು ನಿಮ್ಮನ್ನ ಮೆಚ್ಚಿಸೋಕೇಂತ ಸುಳ್ಳುಪಳ್ಳು ಹೇಳ್ತಿಲ್ಲ. ಇವನ ಆರೈಕೆ ಮಾಡ್ಬೇಕಾದ್ರೆ ದೇವರ ಸೇವೆ ಮಾಡ್ತಿದೀನಿ ಅನ್ನುತ್ತೆ ನಂಗೆ. ಏಳೇಳು ಜನ್ಮದ ಪಾಪಶೇಷ ಉಳ್ಕೊಂಡಿದ್ರೆ ಕರಗಿ ಹೋಗುತ್ತೆ ಅನ್ನುತ್ತೆ..."

"ಹಂಗಾರೆ ಇವನನ್ನ ದತ್ತು ತಗೋತೀಯಾ?"

"ಓ, ನೀವು ಕೊಡ್ತೀನೀಂದ್ರೆ ಧಾರಾಳವಾಗಿ. ಏನೋ ಪಾಪಣ್ಣ, ಬರ್ತೀಯೇನೋ ನಮ್ಮನೇಗೆ?" ಮಾಲಕ್ಷ್ಮಿ ಬಾಗಿ ಹುಡುಗನ ನೆತ್ತಿಯ ಮೇಲೆ ಚುಂಬಿಸಿದಳು. ಈ ಚರ್ಯೆಯಲ್ಲಿ ಯಾವ ನಾಟಕೀಯತೆಯೂ ಕಾಣಿಸದೆ ಜನಾರ್ದನನಿಗೆ ಮುದವೆನಿಸಿತು. ಬುದ್ಧಿ ತಿಳಿಯದ ಹುಡುಗನಿಗೆ ಒದ್ದ ಕಾಲು ನೆನಪಾಯಿತು. ಪ್ರೀತಿ, ಪ್ರೇಮದ ಗುತ್ತಿಗೆ ರಕ್ತಸಂಬಂಧಕ್ಕಷ್ಟೇ ಸೀಮಿತವೇ? ಸುಳ್ಳು, ಸುಳ್ಳು. ಮಾನವೀಯತೆ ಉಳಿಸಿಕೊಂಡ ಪ್ರತಿಯೊಬ್ಬರಲ್ಲೂ ಇನ್ನೊಬ್ಬರಿಗೆ ಹಂಚುವಷ್ಟು ಸಹೃದಯತೆ ಉಳಿದುಕೊಂಡಿರುತ್ತದೆ ಅನಿಸಿತು.

"ನಾನು ದತ್ತು ಕೊಡ್ತೀನಿ, ನೀನು ತಗೋತಿ. ನಾನು ಗೊಟಕ್ ಅಂದ್ರೆ ನೇತ್ರಾ ಬಂದು ಇದ್ದಿದ್ದನ್ನೆಲ್ಲಾ ಮಾರಿ, ತೂರಿ ದುಡ್ಡು ಬಾಚಿಕೊಂಡು ಹೋಗ್ತಾಳೆ. ಇವನನ್ನ ಹೇಗೆ ಸಾಕ್ತಿ ನೀನು?"

"ಸಾಯೋ ಮಾತು ಯಾಕೆ ಆಡ್ತೀರಿ? ಯಾರಿಗೆ, ಯಾವಾಗ ಸಾವು ಬರುತ್ತೇಂತ ಗೊತ್ತಿದ್ದಿದ್ರೆ ಈ ಪ್ರಪಂಚ ಹೀಗಿರ್ತಿತ್ತಾ?"

ಒಪ್ಪತಕ್ಕಂತಾ ಮಾತು. ಪರವಾಗಿಲ್ಲ ಮಾಲಕ್ಷ್ಮಿ. ಹೆಡ್ಡಿಯಂತೆ ಕಂಡರೂ ಹೆಡ್ಡಿಯೇನಲ್ಲ.

"ಮಾಲಕ್ಷ್ಮೀ, ಒಂದು ಮಾತು ಕೇಳ್ತೀನಿ. ಚೆನ್ನಾಗಿ ಯೋಚ್ನೆ ಮಾಡಿ ಉತ್ತರ ಕೊಡು..."

"..."

"ನನ್ನನ್ನ ಮದುವೆ ಮಾಡ್ಕಂತೀಯಾ? ನಮ್ಮ ಪಾಪಣ್ಣಂಗೆ ಹಕ್ಕಿನ ಅಮ್ಮ ಆಗ್ತೀಯಾ?"

ಈ ಮನುಷ್ಯನಿಗೆ ಹುಚ್ಚು ಹಿಡಿದಿದೆಯಾ ಅನ್ನುವಂತೆ ಕಣ್ಣಗಲಿಸಿ ಜನಾರ್ದನನನ್ನು ನೋಡಿದಳು ಮಾಲಕ್ಷ್ಮಿ. ಬಾಯಲ್ಲೂ ಅದನ್ನೇ ಹೇಳಿದಳು,

"ನಿಮ್ಮ ಮಾತು ಕೇಳಿದ್ರೆ ಯಾರಾದ್ರೂ ಹುಚ್ಚು ಅಂತಾರೆ..."

"ನನ್ನ ಪ್ರಶ್ನೆಗೆ ಉತ್ತರ ಬರ್ಲಿಲ್ಲ..."

"ಕೈ ಮುಗೀತೀನಿ, ಬ್ಯಾಡ ಮಾರಾಯ್ರೇ. ಈಗಾಗ್ಲೇ ನೇತ್ರಾ ಏನೇನು ಅಂದ್ಕಂಡಿದಾಳೋ. ನಿಮ್ಮ ದುಡ್ಡಿಗೆ ಬಾಯಿ ಕಳ್ಕಂಡು ಬಲೆ ಬೀಸ್ತಿದೀನಿ ಅಂದ್ಕಂಡಿದ್ರೆ ಆಶ್ಚರ್ಯ ಇಲ್ಲ."

"ಹಂಗಂತ ಬಾಯ್ಬಿಟ್ಟು ಹೇಳಿದ್ಲಾ?"

ಮಾತಾಡಲಿಲ್ಲ ಮಾಲಕ್ಷ್ಮಿ. ಅರ್ಥವಾಯಿತು ಜನಾರ್ದನನಿಗೆ. ಪರೋಕ್ಷವಾಗಿ ಕಿವಿಗೆ ಬೀಳುವಂತೆ ಏನಾದರೂ ಅಂದಿರುತ್ತಾಳೆ ನೇತ್ರಾ. ಮಗುವಿನ ಮೇಲಿನ ಪ್ರೀತಿಗೆ, ಅದರ ಅಸಹಾಯಕತೆಗೆ ಇವಳು ಎಲ್ಲವನ್ನೂ ಹೊಟ್ಟೆಯಲ್ಲಿ ಹಾಕಿಕೊಂಡು ಹೊಕ್ಕುಬಳಕೆ